# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 716 (774) |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13-03-2025 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಇತ್ತೀಚಿನ ದಿನಗಳಲ್ಲಿ ನಡೆಸುತ್ತಿರುವ ಪರೀಕ್ಷೆಗಳಲ್ಲಿ ಹೆಚ್ಚಿನ ಅಪಸ್ವರಗಳು ಬರುತ್ತಿರುವ ಮತ್ತು ಆಯೋಗದ ಲೋಪಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದ್ದಲ್ಲಿ ಇದಕ್ಕೆ ಸರ್ಕಾರದ ಕ್ರಮಗಳೇನು; (ಮಾಹಿತಿ ಒದಗಿಸುವುದು) | ಕರ್ನಾಟಕ ಲೋಕಸೇವಾ ಆಯೋಗವು ಜನವರಿ 2024 ರಿಂದ ಇಲ್ಲಿಯವರೆಗೆ 12 ಅಧಿಸೂಚನೆಗಳಲ್ಲಿ ಅಧಿಸೂಚಿಸಲಾದ ಒಟ್ಟು 1734 ಹುದ್ದೆಗಳಿಗೆ 37 ಪತ್ರಿಕೆಗಳಿಗೆ ಒಟ್ಟಾರೆ 11,40,292 ಅಭ್ಯರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಯಾವುದೇ ಲೋಪ ದೋಷಗಳಿಲ್ಲದೆ ಸುಲಲಿತವಾಗಿ ನಡೆಸಲಾಗಿರುತ್ತದೆ.<br><br>ಸದರಿ ಪರೀಕ್ಷೆಗಳ ಪೈಕಿ ದಿನಾಂಕ:27-08-2024 ರಂದು ನಡೆದ 2023-24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಪರೀಕ್ಷೆ ಹಾಗೂ ದಿನಾಂಕ:29-12-2024ರಂದು ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಮರು ಪರೀಕ್ಷೆಗಳಲ್ಲಿ ಕನ್ನಡ ಪ್ರಶ್ನೆ ಪತ್ರಿಕೆಯಲ್ಲಿ ಭಾಷಾಂತರ ಲೋಪದೋಷಗಳ ಬಗ್ಗೆ ಪರೀಕ್ಷಾರ್ಥಿಗಳಿಗೆ ಗೊಂದಲ ಉಂಟಾಗಿರುವುದಾಗಿ ಅಭ್ಯರ್ಥಿಗಳು ಹಾಗೂ ಸಂಘ/ ಸಂಸ್ಥೆಗಳು ಮನವಿ ಸಲ್ಲಿಸಿರುತ್ತಾರೆ.<br><br>ದಿನಾಂಕ:23-01-2025 ರಂದು ಮುಖ್ಯ ಕಾರ್ಯದರ್ಶಿಯವರು ಸಭೆ ನಡೆಸಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಲೋಕಸೇವಾ ಆಯೋಗಗಳ ಸಹಯೋಗದೊಂದಿಗೆ ಒಂದು ಕನ್ನಡ ಭಾಷಾ ತಜ್ಞರ ತಂಡವನ್ನು ರಚಿಸಲು ಪರಿಶೀಲಿಸಲಾಗುತ್ತಿದೆ. |
| ಆ | ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿಯೂ ಸಹ ಕನ್ನಡ ಭಾಷೆಯಲ್ಲಿನ ಪ್ರಶ್ನೆಗಳಲ್ಲಿಯೇ ತಪ್ಪುಗಳಾಗುತ್ತಿರುವುದು ಎಷ್ಟು ಸರಿ ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ ಹಾಗೂ ಅವರ ಮೇಲೆ ತೆಗೆದುಕೊಂಡ ಕಠಿಣ ಕ್ರಮಗಳೇನು; (ಮಾಹಿತಿ ಒದಗಿಸುವುದು) | ಆಯೋಗವು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪ್ರಶ್ನೆಗಳನ್ನು ವಿಷಯ ತಜ್ಞರುಗಳಿಂದ ಪಡೆದು, ಆಂಗ್ಲ ಭಾಷೆಯಲ್ಲಿರುವಂತಹ ಪ್ರಶ್ನೆಗಳನ್ನು ಕನ್ನಡಕ್ಕೆ ಭಾಷಾಂತರಿಸಲು ಭಾಷಾಂತರಕಾರರ ಹಾಗೂ ವಿಷಯ ತಜ್ಞರುಗಳ ನೆರವನ್ನು ಪಡೆಯಲಾಗುತ್ತಿದೆ.<br><br>ಈ ಸಂಬಂಧ ಅಭ್ಯರ್ಥಿಗಳಿಂದ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಲು, ಉತ್ತಮ ಕನ್ನಡ ಭಾಷಾ ಜ್ಞಾನವನ್ನು ಹೊಂದಿರುವ ಹಾಗೂ ಆಯಾ ವಿಷಯಗಳಲ್ಲಿ ಪರಿಣತಿ ಹೊಂದಿರುವಂತಹ ಮೂವರು ವಿಷಯ ತಜ್ಞರುಗಳ ಸಮಿತಿಗಳನ್ನು ರಚಿಸಿ ಅಭಿಪ್ರಾಯವನ್ನು ಪಡೆಯಲಾಗಿದ್ದು, ಭಾಷಾಂತರ |

| | | |
|---|---|---|
| | | ಮತ್ತು ತಾಂತ್ರಿಕ ದೋಷದಿಂದಾಗಿ ಕೆಲವು ಪ್ರಶ್ನೆಗಳಿಗೆ ಕೃಪಾಂಕ ಹಾಗೂ ಕೆಲವು ಪ್ರಶ್ನೆಯ ಕೀ-ಉತ್ತರವನ್ನು ಪರಿಷ್ಕರಿಸ ಬೇಕೆಂದು, ಕೆಲವು ಪ್ರಶ್ನೆಗಳಲ್ಲಿ ವ್ಯತ್ಯಾಸವಿದ್ದರೂ ಸಹ ಪ್ರಶ್ನೆಯನ್ನು ಅರ್ಥೈಸಿಕೊಳ್ಳಬಹುದೆಂದು, ಕೆಲವು ಪ್ರಶ್ನೆಗಳಲ್ಲಿ ಕಾಗುಣಿತಾಕ್ಷರಗಳ ಮುದ್ರಣ ದೋಷವಾಗಿರುವುದಾಗಿಯೂ ಹಾಗೂ ಇನ್ನುಳಿದ ಪ್ರಶ್ನೆಗಳಲ್ಲಿ ಯಾವುದೇ ಭಾಷಾಂತರ ವ್ಯತ್ಯಾಸವಿರುವುದಿಲ್ಲವೆಂದು ಅಭಿಪ್ರಾಯ ನೀಡಿರುತ್ತಾರೆ. |
| ಇ | ಇತ್ತೀಚೆಗೆ ಪರೀಕ್ಷೆಗಳನ್ನು ಬರೆದು ಅದರಲ್ಲಿ ಬಾಧಿತರಾದ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ಒದಗಿಸುವುದು) | ದಿನಾಂಕ:29-12-2024ರಂದು ಗೆಜೆಟೆಡ್ ಪ್ರೊಬೆಷನರ್ಸ್ ಪೂರ್ವಭಾವಿ ಮರು ಪರೀಕ್ಷೆಗಳಲ್ಲಿ ಭಾಷಾಂತರ ಮತ್ತು ತಾಂತ್ರಿಕ ದೋಷದಿಂದಾಗಿ 5 ಪ್ರಶ್ನೆಗಳಿಗೆ ಕೃಪಾಂಕ ಹಾಗೂ 1 ಪ್ರಶ್ನೆಯ ಕೀ-ಉತ್ತರವನ್ನು ವಿಷಯ ತಜ್ಞರುಗಳ ಅಭಿಪ್ರಾಯದ ಮೇರೆಗೆ ಪ್ರಕಟಿಸಲಾಗಿರುತ್ತದೆ. |
| ಈ | ಕೇಂದ್ರ ಸರ್ಕಾರದ ಯು.ಪಿ.ಎಸ್.ಸಿ. ಮಾದರಿಯಲ್ಲಿಯೇ ಪರೀಕ್ಷೆಗಳನ್ನು ನಡೆಸಲು ಮತ್ತು ಅದಕ್ಕೆ ಸಂಬಂಧಿಸಿದ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರದ ವತಿಯಿಂದ ಒಂದು ಅಧಿಕಾರಿಗಳ ತಂಡವನ್ನು ಯು.ಪಿ.ಎಸ್.ಸಿಗೆ ಕಳುಹಿಸಿ ಅಧ್ಯಯನವನ್ನು ನಡೆಸಲು ಸರ್ಕಾರದ ತೀರ್ಮಾನಗಳೇನು? (ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ಕೇಂದ್ರ ಲೋಕಸೇವಾ ಆಯೋಗವು ಗ್ರೂಪ್-ಎ ಮತ್ತು ಬಿ ವೃಂದದ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಮಾತ್ರ ನಡೆಸುತ್ತದೆ. ಉಳಿದಂತೆ ಗ್ರೂಪ್-ಸಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ Staff Selection Commission (SSC) ವತಿಯಿಂದ ನಡೆಸಲಾಗುತ್ತದೆ.<br><br>ಆದರೆ, ಕರ್ನಾಟಕ ಲೋಕಸೇವಾ ಆಯೋಗವು ಗ್ರೂಪ್-ಎ, ಬಿ ಮತ್ತು ಸಿ ವೃಂದದ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ನಡೆಸುತ್ತದೆ. ಆದ್ದರಿಂದ, ಕೇಂದ್ರ ಲೋಕಸೇವಾ ಆಯೋಗದ ಪರೀಕ್ಷಾ ವಿಧಿ ವಿಧಾನಗಳನ್ನು ಕರ್ನಾಟಕ ಲೋಕಸೇವಾ ಆಯೋಗವು ಪರೀಕ್ಷೆಗಳಲ್ಲಿ ಅಳವಡಿಸಲು ಕ್ರಮಕೈಗೊಳ್ಳಲಾಗುವುದು. |

**ಸಂಖ್ಯೆ. ಸಿಆಸುಇ 53 ಎಸ್ಎಲ್ಎ 2025**

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**